**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 1224/2024**

| | | | |
|---|---|---|---|
| **ಹೆಸರು** | **:** | **ವಿಷ್ಣುಕಾಂತ** | **ಚಾ.ಸಾ. 1** |
| **ತಂದೆಯ ಹೆಸರು** | **:** | **ನಾಗೇಂದ್ರಪ್ಪ** | **ಪ್ರಾ.ಸಾ. 1** |
| **ವಯಸ್ಸು** | **:** | **42 ವರ್ಷ** | **ದಿನಾಂಕಃ 08-07-2025** |
| **ಉದ್ಯೋಗ** | **:** | **ಗುತ್ತಿಗೆ ಕೆಲಸ** | |
| **ವಾಸಸ್ಥಳ** | **:** | **ಐನೋಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-4 ರಿಂದ 10 ರವರು ನನಗೆ ಪರಿಚಯವಿದ್ದಾರೆ. ಆರೋಪಿತರೆಲ್ಲರೂ ನನಗೆ ಗೊತ್ತು. ಅವರು ನಮ್ಮ ಊರಿನವರು.

ನಾನು ಕಲಬುರಗಿಯಲ್ಲಿ ವಾಸವಿದ್ದು ಐನೋಳ್ಳಿಯಲ್ಲಿ ಕೆಲಸಕ್ಕೆಂದು ವಾರಕ್ಕೆ ಒಂದು ಬಾರಿ ಬರುತ್ತೇನೆ. ದಿನಾಂಕ 21-07-2023 ರಂದು ನಾನು ಚಿಂಚೋಳಿಗೆ ಬಂದು ಇಲ್ಲಿಂದ ಐನೋಳ್ಳಿಗೆ ನಾನು ಹಾಗೂ ಚಾಸಾ-5ರವರು ಸಾಯಂಕಾಲ 7 ಗಂಟೆ ಹೋಗಿರುತ್ತೇವೆ. ನಂತರ ಸಾಯಂಕಾಲ 9 ಗಂಟೆ ಸುಮಾರಿಗೆ ಐನೋಳ್ಳಿಯಲ್ಲಿರುವ ನಮ್ಮ ಮನೆಯಲ್ಲಿ ನಾನು ಮತ್ತು ಚಾಸಾ-5ರವರು ಊಟ ಮಾಡಿ 9 ಗಂಟೆ ಸುಮಾರಿಗೆ ಚಾಸಾ-5ರವರು ತಮ್ಮ ಮನೆಗೆ ಹೋಗಿರುತ್ತಾರೆ.

ಚಾಸಾ-4ರವರು ಮೊದಲು ನಮ್ಮ ಮನೆಯಲ್ಲಿ ಬಾಡಿಗೆಗಾಗಿ ಇದ್ದು ಆಗಾಗ ಹಣ ನನ್ನಿಂದ ಪಡೆಯುತ್ತಿದ್ದರು. ರಾತ್ರಿ 9 ರಿಂದ 9.30 ಗಂಟೆ ಸುಮಾರಿಗೆ ಚಾಸಾ-4ರವರು ನಮ್ಮ ಮನೆಗೆ ಬಂದಾಗ ನಾನು ಮತ್ತು ಅವರು ಮಾತನಾಡುತ್ತಾ ಕುಳಿತಾಗ 20 ರಿಂದ 25 ನಮ್ಮ ಗ್ರಾಮದ ಹುಡುಗರು ನಮ್ಮ ಮನೆಯ ಗೇಟನ್ನು ಒದ್ದು ಒಳಗೆ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೈಯಲು ಪ್ರಾರಂಭಿಸಿರುತ್ತಾರೆ. ಅವರಲ್ಲಿ ನಸೀರರವರು ಇಸ್ಕೋ ಬಹಾರ ಲೇಕೆ ಆವ ಔರ ಮಾರೋ ಎಂದು ಹೇಳಿರುತ್ತಾರೆ. ನಸೀರ-1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿತರನ್ನು ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).

ನಂತರ 2 ಮತ್ತು 3ನೇ ಆರೋಪಿತರು ನನ್ನ ಕೈಹಿಡಿದು ಹೊರಗೆ ಎಳೆದುಕೊಂಡು ಬಂದಿರುತ್ತಾರೆ. 4 ಮತ್ತು 5ನೇ ಆರೋಪಿತರು ನನಗೆ ಕೆಳಗೆ ಹಾಕಿ ಒದ್ದಿರುತ್ತಾರೆ. 8 ಮತ್ತು 9ನೇ ಆರೋಪಿತರು ಒಂದು ಕಟ್ಟಿಗೆಯಿಂದ ನನಗೆ ಹೊಡೆದಿರುತ್ತಾರೆ. 10 ಮತ್ತು 11ನೇ ಆರೋಪಿತರು ನನಗೆ ಹೊಟ್ಟೆಗೆ ಹಾಗೂ ಎದೆಗೆ

ಹೊಡೆದು ಇಸ್ಕೊ ಖತಂ ಕರೋ ಎಂದು ಜೀವ ಬೇದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 5 ಮತ್ತು 6ನೇ ಆರೋಪಿತರು ನನಗೆ ಹೊಡೆಯಲು ಪ್ರಾರಂಭಿಸಿದಾಗ ಚಾಸಾ-4 ರವರು ನನಗೆ ಬಿಡಿಸಲು ಬಂದಾಗ 9ನೇ ಆರೋಪಿ ಚಾಸಾ-4ರವರ ಕೂದಲು ಹಿಡಿದು ಕೆಳಗೆ ಬೀಳಿಸಿರುತ್ತಾನೆ. ಅಜರ್ ಎಂಬ ವ್ಯಕ್ತಿ ಚಾಸಾ-4ರವರ ನೈಟಿ ಹಿಡಿದು ಎಳೆದಾಡಿ ಎದೆಯ ಮೇಲೆ ಹೊಡೆದಿರುತ್ತಾರೆ. 3 ಮತ್ತು 11ನೇ ಆರೋಪಿತರು ಚಾಸಾ-4ರವರಿಗೆ ಒದ್ದಿರುತ್ತಾರೆ. ಆಗ 1, 3, 4 ಮತ್ತು 11ನೇ ಆರೋಪಿತರು ಚೂಪಾದ ವಸ್ತುವಿನಿಂದ ಹೊಡೆದು ಇವರಿಗೆ ಕೊಲೆ ಮಾಡೋಣ ಎಂದು ಹೇಳುತ್ತಿದ್ದರು.

ನಮ್ಮ ಕಲ್ಲಿನ ಮನೆಯ ಮೇಲೆ 1 ಮತ್ತು 11ನೇ ಆರೋಪಿತರು ಹೋಗಿ ಕಲ್ಲನ್ನು ನಮ್ಮ ಮೇಲೆ ಎಸೆಯಲು ಪ್ರಯತ್ನ ಪಟ್ಟಿರುತ್ತಾರೆ. ಆರೋಪಿತರೆಲ್ಲರೂ ನಮಗೆ ಕೊಲೆ ಮಾಡುವ ಉದ್ದೇಶದಿಂದ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ.

ಚುನಾವಣೆಯಲ್ಲಿ ಆರೋಪಿತರ ಮಾತನ್ನೆ ಕೇಳಬೇಕು ಮತ್ತು ಅವರು ಹೇಳಿದ ರೀತಿಯ ಹಾಗೇ ಮಾಡಬೇಕು ಹಾಗೂ ಅವರು ಗುಟಕಾ ತಿಂದು ನಮ್ಮ ಮನೆಯ ಮುಂದೆ ಉಗಿದರು ಸಹ ನಾವು ಸುಮ್ಮನೇ ಕೂಡಬೇಕು ಮತ್ತು ನಮ್ಮ ವಾಹನವನ್ನು ಅಡ್ಡಗಟ್ಟಿ ನಿಮಗೆ ಹೊಡೆಯುತ್ತೇವೆ ಎಂದು ಹೇಳಿ ಇವೆಲ್ಲ ಉದ್ದೇಶದಿಂದ ಆರೋಪಿತರೆಲ್ಲರೂ ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ.

ನಂತರ ಚಾಸಾ-5, 7 ಮತ್ತು 8 ರವರು ಜಗಳವನ್ನು ಬಿಡಿಸಿರುತ್ತಾರೆ. ಆರೋಪಿತರೆಲ್ಲರೂ ಹೋಗುವ ಸಮಯಕ್ಕೆ ನನಗೆ ಜೀವ ಬೆದರಿಕೆ ಹಾಕಿರುತ್ತಾರೆ. ಘಟನೆಯ ವಿಡಿಯೋವನ್ನು 1 ಮತ್ತು 11ನೇ ಆರೋಪಿತರು ತಮ್ಮ ಮೊಬೈಲ ಫೋನಿನಲ್ಲಿ ರೇಕಾರ್ಡ ಮಾಡಿ ವಾಟ್ಸ ಆಪ್‌ನಲ್ಲಿ ಹಂಚಿಕೊಂಡಿರುತ್ತಾರೆ.  ಚಾಸಾ-5ರವರಿಂದ ಆರೋಪಿತರು ವಿಡಿಯೋ ಹಂಚಿಕೊಂಡಿರುತ್ತಾರೆ ಎಂದು ಗೊತ್ತಾಗಿರುತ್ತದೆ. ಸದರಿ ವಿಡಿಯೋವನ್ನು ಚಾಸಾ-5 ರವರ ಫೋನಿನಲ್ಲಿ ನೋಡಿದ್ದೇನೆ. ಸದರಿ ವಿಡಿಯೋವನ್ನು ಪೋಲಿಸರಿಗೆ ನೀಡಿಲ್ಲ.

ಮರುದಿನ ಬೆಳಗ್ಗೆ ನಾನು ಪೋಲಸ ಠಾಣೆಗೆ ಹೋಗಿ ದೂರು ನೀಡಬೇಕು ಎಂದು ವಿಚಾರ ಮಾಡಿದಾಗ 3, 10 ಮತ್ತು 11ನೇ ಆರೋಪಿತರು ನಮ್ಮ ಮನೆಗೆ ಬೆಳಗ್ಗೆ 9 ರಿಂದ 9.30 ಗಂಟೆಗೆ ಬಂದು ನೀನು ದೂರು ನೀಡಿದರೇ ವಿಡಿಯೋವನ್ನು ಮಿಡಿಯಾದಲ್ಲಿ ಬಿಡುತ್ತೇವೆ ಎಂದು ಬೇದರಿಸಿರುತ್ತಾರೆ. ಆದ್ದರಿಂದ ನಾನು ಪೋಲಿಸ ಠಾಣೆಗೆ ಹೋಗದೇ ಮನೆಯಲ್ಲಿಯೇ ಬೇಜಾರಿನಿಂದ ಕುಳಿತ್ತಿರುತ್ತೇನೆ.

ಘಟನೆ ಕಾರಣ ನನ್ನ ತಲೆಗೆ, ಎಡಗೈ ಹಾಗೂ ಬೆನ್ನಿಗೆ ಬಡಿಗೆಯಿಂದ ಹೊಡೆದ ಗಾಯವಾಗಿತ್ತು ಮತ್ತು ರಕ್ತಗಾಯವಾಗಿರಲಿಲ್ಲ. ದಿನಾಂಕ 23-07-2023  ರಂದು ಚಾಸಾ-10 ರವರು ನಮ್ಮ ಮನೆಗೆ ಬಂದು ನನ್ನ ಪರಿಸ್ಥಿತಿ ನೋಡಿ ಕಲಬುರಗಿಯ ಯುನೈಟೇಡ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಸ್ಪತ್ರೆಯಲ್ಲಿ ಮೂರು ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ನಂತರ ಆರೋಪಿತರಿಗೆ ಶಿಕ್ಷೆ ಕೊಡಿಸಬೇಕು ಎಂದು ದಿನಾಂಕ 24-07-2023 ರಂದು ಸಾಯಂಕಾಲ 6-7 ಗಂಟೆ ಸುಮಾರಿಗೆ ಪೋಲಿಸರು ನನ್ನ ಹೇಳಿಕೆಯನ್ನು ಯುನೈಟೇಡ್

ಆಸ್ಪತ್ರೆಯಲ್ಲಿ ಪಡೆದಿರುತ್ತಾರೆ. ಪೋಲಿಸರು ಮರುದಿನ ಪ್ರಕರಣವನ್ನು ದಾಖಲಿಸಿರುತ್ತಾರೆ. ಆರೋಪಿತರ ಭಯದಿಂದ 1 ವರ್ಷಗಳ ಕಾಲ ಐನೋಳ್ಳಿ ಗ್ರಾಮಕ್ಕೆ ನಾನು ಹೋಗಿರುವುದಿಲ್ಲ.

ನಾನು ಪೋಲಿಸರಿಗೆ ಕೋಟ್ಟಿರುವ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿತರು ಹಲ್ಲೆ ಮಾಡಲು ಬಳಸಿದ ಕಟ್ಟಿಗೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆಯನ್ನು ನೋಡಿ ಗುರುತಿಸಿದ್ದಾರೆ. ಸದರಿ ಕಟ್ಟಿಗೆಯನ್ನು ಮು.ಮಾ-1 ಎಂದು ಗುರುತಿಸಲಾಯಿತು.

**ಮುಂದಿನ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**